ಶ್ರೀ ಎಸ್.ಎ. ರವೀಂದ್ರನಾಥ್ :– ಮಾನ್ಯ ಅಧ್ಯಕ್ಷರೆ, ಖಾಸಗಿ ಕಂಪನಿಯವರ ಮೇಲೆ ಸಹ ಈ ವರ್ಷ ನಿಯಂತ್ರಣ ಮಾಡಿ ಕಡಿಮೆ ಲಾಭಕ್ಕೆ ಕೊಡುವಂತಹ ರೀತಿಯಲ್ಲಿ ಪ್ರಯತ್ನ ಮಾಡುತ್ತೇನೆ. ಅವರು ಹೇಳುವುದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ :– 75 ರೂ.ಗೆ ಬೀಜ ಬರುತ್ತವೆ. ನಿಮ್ಮ ಇಲಾಖೆಯಿಂದ ಮಾಡಿಸಿ. ನಿಮ್ಮ ಕಾಲದಲ್ಲಿ ಮಾಡಿದರೆ ನಿಮಗೆ ಒಳ್ಳೆಯ ಹೆಸರು ಬರುತ್ತದೆ. ಸಬ್ಸಿಡಿ ಕೊಡಬೇಡಿ, ಸಬ್ಸಿಡಿ ದುಡ್ಡಿನಲ್ಲಿ ಉಚಿತವಾಗಿ ಬಿಜ ಕೊಡುತ್ತೇವೆಂದು ಹೇಳಿ

ಅಧ್ಯಕ್ಷರು :– ನಿಮ್ಮ ಇಲಾಖೆಯಿಂದ ಮಾಡಿ. ಮಾನ್ಯ ರೇವಣ್ಣನವರೇ ಮುಂದಿನ ಪ್ರಶ್ನೆ ಕೇಳಿ.

ರಾಜ್ಯದಲ್ಲಿರುವ ಸಹಕಾರ ಸಂಘಗಳ ಬಗ್ಗೆ

66(403) ಶ್ರೀ ಹೆಚ್.ಡಿ.ರೇವಣ್ಣ (ಹೊಳೇನರಸೀಪುರ)

ಅ) ರಾಜ್ಯದಲ್ಲಿರುವ ಸಹಕಾರ ಸಂಘಗಳೆಷ್ಟು; ಇವುಗಳಲ್ಲಿ ಕ್ರಿಯಾಶೀಲ ಮತ್ತು ನಿಷ್ಕ್ರಿಯ ಸಹಕಾರ ಸಂಘಗಳೆಷ್ಟು?

ರಾಜ್ಯದಲ್ಲಿ ದಿನಾಂಕ 31–12–2008ರ ಅಂತ್ಯಕ್ಕೆ ಒಟ್ಟು 33495 ಸಹಕಾರ ಸಂಘಗಳಿದ್ದು, ಇವುಗಳ ಪೈಕಿ 28620 ಕಾರ್ಯನಿರತ ಸಹಕಾರ ಸಂಘಗಳು, 2654 ನಿಷ್ಕ್ರಿಯ ಸಹಕಾರ ಸಂಘಗಳು ಮತ್ತು 2221 ಸಮಾನಾ ಹಂತದ ಸಹಕಾರ ಸಂಘಗಳಿರುತ್ತವೆ.

ಆ) ಕಳೆದ ಮೂರು ವರ್ಷಗಳಿಂದ ವರ್ಷಾವಾರು ಆಡಿಟ್ ಮಾಡಲಾದ ಸಹಕಾರ ಸಂಘಗಳೆಷ್ಟು; ಇದೇ ಅವಧಿಯಲ್ಲಿ ಮರು ಆಡಿಟ್ ಮಾಡಲಾದ ಸಹಕಾರ ಸಂಘಗಳೆಷ್ಟು (ವಿವರ ನೀಡುವುದು)

ಕಳೆದ ಮೂರು ವರ್ಷಗಳಲ್ಲಿ ಲೆಕ್ಕಪರಿಶೋಧನೆ ನಿರ್ವಹಿಸಲಾದ ಸಹಕಾರ ಸಂಘಗಳ ವಿವರಗಳು ಈ ಕೆಳಕಂಡಂತಿರುತ್ತವೆ.

1–4–2005 ರಿಂದ 31–3–2006

ವಿವರ	ಸಂಘಗಳ ಕಾರ್ಯಸ್ಥಿತಿ			ಒಟ್ಟು
	ಕಾರ್ಯ ನಿರತ	ನಿಷ್ಕ್ರಿಯ	ಸಮಾಪನಾ	
ಲೆಕ್ಕ ಪರಿಶೋಧನೆಗೆ ಇದ್ದ ಸಹಕಾರ ಸಂಘಗಳ ಸಂಖ್ಯೆ	26,867	2,891	2,844	32,602
ಲೆಕ್ಕ ಪರಿಶೋಧನೆ ಆದ ಸಹಕಾರ	20,569	1,022	1,223	22,814

ಸಂಘಗಳ ಸಂಖ್ಯೆ				
ಉಳಿಕೆ	6,298	1,869	1,621	9,788

1-4-2006 ರಿಂದ 31-3-2007

ವಿವರ	ಸಂಘಗಳ ಕಾರ್ಯಸ್ಥಿತಿ			ಒಟ್ಟು
	ಕಾರ್ಯ ನಿರತ	ನಿಷ್ಕ್ರಿಯ	ಸಮಾಪನಾ	
ಲೆಕ್ಕ ಪರಿಶೋಧನೆಗೆ ಇದ್ದ ಸಹಕಾರ ಸಂಘಗಳ ಸಂಖ್ಯೆ	27,142	2,718	2,633	32,493
ಲೆಕ್ಕ ಪರಿಶೋಧನೆ ಆದ ಸಹಕಾರ ಸಂಘಗಳ ಸಂಖ್ಯೆ	20,120	804	1,157	22,081
ಉಳಿಕೆ	7022	1914	1476	10,412

1-4-2007 ರಿಂದ 31-3-2008

ವಿವರ	ಸಂಘಗಳ ಕಾರ್ಯಸ್ಥಿತಿ			ಒಟ್ಟು
	ಕಾರ್ಯ ನಿರತ	ನಿಷ್ಕ್ರಿಯ	ಸಮಾಪನಾ	
ಲೆಕ್ಕ ಪರಿಶೋಧನೆಗೆ ಇದ್ದ ಸಹಕಾರ ಸಂಘಗಳ ಸಂಖ್ಯೆ	27,987	2,627	2,341	32,955
ಲೆಕ್ಕ ಪರಿಶೋಧನ ಆದ ಸಹಕಾರ ಸಂಘಗಳ ಸಂಖ್ಯೆ	19,353	636	385	20,874
ಉಳಿಕೆ	8,634	1,991	1,456	12,081

ಈ ಮೇಲ್ಕಂಡ ಮೂರು ವರ್ಷಗಳಲ್ಲಿ ಯಾವುದೇ ಸಂಘದ ಮರು ಆಡಿಟ್ ನಡೆದಿರುವುದಿಲ್ಲ.

ಇ) ಮರು ಆಡಿಟ್ ಮಾಡಿದ ಸಹಕಾರ ಸಂಘಗಳಲ್ಲಿ ಕಂಡುಹಿಡಿಯಲಾದ ಲೋಪದೋಷಗಳು ಮತ್ತು ಆ ಬಗ್ಗೆ ತೆಗೆದು ಕೊಂಡ ಕ್ರಮಗಳೇನು?

ಮರು ಆಡಿಟ್ ನಡೆಯದೆ ಇರುವುದರಿಂದ ಅನ್ವಯಿಸುವುದಿಲ್ಲ.

ಈ) ಮರು ಆಡಿಟ್‌ನಲ್ಲಿ ಮೂಲ ಆಡಿಟ್‌ನಲ್ಲಿಲ್ಲದ ಲೋಪದೋಷಗಳೇನಾದರೂ ಕಂಡು ಬಂದಿದ್ದಲ್ಲಿ ಆಡಿಟ್ ಮಾಡಿದ ಅಧಿಕಾರಿಗಳ ಮತ್ತು ಮೇಲ್ವಿಚಾರಣೆ ಮಾಡಿದ

ಇಲಾಖೆಯ ಅಧಿಕಾರಿಗಳ ಮೇಲೆ ತೆಗೆದುಕೊಂಡ ಕ್ರಮಗಳೇನು (ವಿವರ ನೀಡುವುದು)?

ಮರು ಆಡಿಟ್ ನಡೆಯದೆ ಇರುವುದರಿಂದ ಅನ್ವಯಿಸುವುದಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ :–ಮಾನ್ಯ ಅಧ್ಯಕ್ಷರೆ, ಮಾನ್ಯ ಸಹಕಾರ ಸಚಿವರು ರಾಜ್ಯದಲ್ಲಿ 31.12.2008ಕ್ಕೆ 33,495 ಸಂಘಗಳು ಇವೆ. ಎಂದು ಹೇಳಿದ್ದಾರೆ. ಅದರಲ್ಲಿ 28620 ಕಾರ್ಯನಿರತವಾಗಿವೆ, ಮತ್ತೆ ಇದಲ್ಲದೇ ಈ 28620 ಕಾರ್ಯನಿರತ ಸೊಸೈಟಿಗಳೇನಿವೆ, ಅದರಲ್ಲಿ ಎಷ್ಟು ಲಾಭದಾಯಕವಾಗಿ ಕೆಲಸವನ್ನು ಮಾಡುತ್ತಿವೆ ಮತ್ತು ಎಷ್ಟು ನಷ್ಟದಲ್ಲಿವೆ? ಅದರ ಜೊತೆಗೆ ನಿಷ್ಕ್ರಿತ ಸಂಘ 2221 ಎಂದು ಹೇಳಿದ್ದಾರೆ, ಅದರಲ್ಲಿ ಸಮರ್ಪಣೆ ಆಗಿರುವಂಥದ್ದು ಸುಮಾರು 2221, ಇದರಲ್ಲಿ 2654 ನಿಷ್ಕ್ರಿಯ ಇದೆಯೆಂದು ಹೇಳುತ್ತಾರೆ. ಸುಮಾರು ನಾಲ್ಕು ಸಾವಿರಕ್ಕೂ ಹೆಚ್ಚು ಸೊಸೈಟಿಗಳು ಈ ರೀತಿಯಾಗುವುದಕ್ಕೆ ಆಡಳಿತ ಮಂಡಳಿ ಕಾರಣವೋ ಅಥವಾ ಸಹಕಾರಿ ಇಲಾಖಾಧಿಕಾರಿಗಳು ಕಾರಣವೋ ಎಂಬ ಬಗ್ಗೆ ಹೇಳಬೇಕು. ಇದರಲ್ಲಿ ಆಡಿಟ್ ಮಾಡಿದ್ದಾರೋ, ಇಲ್ಲವೋ ಎಂಬ ದಯಮಾಡಿ ಹೇಳಬೇಕು. ಇದು ನನ್ನ ಮೊದಲನೆಯ ಪ್ರಶ್ನೆ. ಇನ್ನು ನನ್ನ ಎರಡನೆಯ ಪ್ರಶ್ನೆ ಏನೆಂದರೆ, ಈ ರಾಜ್ಯದಲ್ಲಿ ದಿನಾಂಕ 01–04–2005 ರಿಂದ 31–03–2006 ರವರೆಗೆ ಸುಮಾರು 26 ಸಾವಿರ ಸಂಘಗಳ ಆಡಿಟ್ ಆಗಿದೆಯೆಂದು ಹೇಳಿದ್ದಾರೆ. ಈ 26 ಸಾವಿರದಲ್ಲಿ 20 ಸಾವಿರ ಸಂಘ ಆಡಿಟ್ ಆಗಿದೆ ಮತ್ತು 6 ಸಾವಿರ ಸಂಘಗಳ ಆಡಿಟ್ ಆಗಿಲ್ಲವೆಂದು ಹೇಳಿದ್ದಾರೆ. ಈ 6 ಸಾವಿರ ಸಂಘಗಳ ಆಡಿಟ್ ಆಗಿಲ್ಲದಿರಲು ಕಾರಣವೇನು? ಮತ್ತೆ ಅದರ ಜೊತೆಗೆ ಸಮರ್ಪಣೆಗೊಂಡಿರುವುದು, ನಿಷ್ಕ್ರಿಯಗೊಂಡಿರುವ ಸಂಘಗಳು ಸೇರಿಕೊಂಡರೆ ಒಟ್ಟು 9700 ಕ್ಕೂ ಹೆಚ್ಚು ಆಗುತ್ತದೆ. ಆದುದರಿಂದ ಈ 6 ಸಾವಿರ ಸಂಘಗಳ ಆಡಿಟ್ ಮಾಡದಿರಲು ಕಾರಣವೇನು ಎಂಬ ಬಗ್ಗೆ ಮಾನ್ಯ ಸಹಕಾರ ಸಚಿವರು ಹೇಳಬೇಕು. ಈ ಸಂಘಗಳಲ್ಲಿ ಆಡಿಟ್ ಮಾಡದೇ ಸಂಘ ನಷ್ಟ ಹೊಂದಲು ಕಾರಣರಾರು? ಇದಕ್ಕೆ ಅಧಿಕಾರಿಗಳು ಕಾರಣರೋ ಅಥವಾ ಆಡಳಿತ ಮಂಡಳಿ ಕಾರಣವೋ ಎಂಬ ಬಗ್ಗೆ ದಯಮಾಡಿ ತಿಳಿಸಬೇಕೆಂದು ಸಹಕಾರ ಸಚಿವರಲ್ಲಿ ಕೇಳಬಯಸುತ್ತೇನೆ. ಮತ್ತೆ ಇದಲ್ಲದೇ 01–04–2006 ರಿಂದ 2007 ರವರೆಗೆ ಸುಮಾರು 27 ಸಾವಿರ ಸಂಘಗಳದ್ದು ಲೆಕ್ಕ ಪರಿಶೋಧನೆಯಾಗಿದೆಯೆಂದು ಹೇಳೂತ್ತಾರೆ. ಇನ್ನುಳಿದ7 ಸಾವಿರ ಸಂಘಗಳದ್ದು ಲೆಕ್ಕ ಪರಿಶೋಧನೆಯಾಗಿಲ್ಲವೆಂದು ಹೇಳುತ್ತಾರೆ. 7 ಸಾವಿರ ಸಂಘಗಳದ್ದು ಆಡಿಟ್ ಆಗದೇ ಅದರಲ್ಲಿ ಅವ್ಯವಹಾರವಾಗಿರುವುದಕ್ಕೆ ಆಡಿಟ್ ಇಲಾಖೆ ಕಾರಣವೇ ಎಂಬ ಬಗ್ಗೆ ದಯಮಾಡಿ ಉತ್ತರವನ್ನು ಹೇಳಬೇಕು. ಏಕೆಂದರೆ ಇವತ್ತಿನ ದಿವಸ ಏನಾಗಿದೆಯೆಂದರೆ, ಈ ಆಡಿಟ್ ಡಿಪಾರ್ಟ್‌ಮೆಂಟ್ ಇರಬಹುದು ಅಥವಾ ಸಹಕಾರಿ ಇಲಾಖಾಧಿಕಾರಿಗಳಿರಬಹುದು, ಎಲ್ಲವನ್ನೂ ಮುಗಿಸಿ ಆಡಳಿತ ಮಂಡಳಿ ತಪ್ಪಿದ್ದರೆ

ಆಡಳಿತ ಮಂಡಳಿ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆ. ಆದರೆ ಸಹಕಾರಿ ಅಧಿಕಾರಿಗಳು ಈ ಅವಧಿಯಲ್ಲಿ ಏನು ಮಾಡುತ್ತಿರುತ್ತಾರೆ?. ಅಂಥ ಎಷ್ಟು ಅಧಿಕಾರಿಗಳ ಮೇಲೆ ನೀವು ಕ್ರಮವನ್ನು ತೆಗೆದುಕೊಂಡಿದ್ದೀರಿ? ಇವತ್ತು ಈ ಸೊಸೈಟಿಗಳಲ್ಲಿ ಎಷ್ಟು ಲುಕ್ಸಾನು ಆಗಿದೆ? ಇದಕ್ಕೆ ಯಾರು ಯಾರು ಕಾರಣಕರ್ತರು? ಇನ್ನು ಇಡೀ ರಾಜ್ಯದಲ್ಲಿ ಒಂದೇ ಒಂದು ಸೊಸೈಟಿಯದ್ದೂ ಕೂಡ ಮರು ಆಡಿಟ್ ಆಗಿಲ್ಲವೆಂದು ಹೇಳುತ್ತೀರಿ. ಕಡೇ ಪಕ್ಷ ಯಾವುದಾದರೂ ಸೊಸೈಟಿಯದ್ದು ಮರುಪರೀಶೀಲನೆಯಾದರೂ ಆಗಿದೆಯೆ? ಈ ರಾಜ್ಯದಲ್ಲಿ 34 ಸಾವಿರ ಸೊಸೈಟಿಗಳಲ್ಲಿ ಯಾವುದೂ Re-Audit ಆಗಿಲ್ಲವೆಂದರೆ ಈ ಎಲ್ಲಾ 34 ಸಾವಿರ ಸೊಸೈಟಿಗಳ ಕೂಡ ಉತ್ತಮವಾಗಿ ಕೆಲಸವನ್ನು ಮಾಡುತ್ತಿವೆಯೆಂದು ನೀವು ಹೇಳಿದರೆ ಸಂತೋಷ. ಸಹಕಾರಿ ಸಚಿವರ ನೇತೃತ್ವದಲ್ಲಿ 34 ಸಾವಿರ ಸೊಸೈಟಿಗಳು ಒಳ್ಳೆಯ ರೀತಿಯಲ್ಲಿ ಕೆಲಸವನ್ನು ಮಾಡುತ್ತಿದ್ದರೆ ನಾನು ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಮರು-ಆಡಿಟ್ ಯಾವುದೂ ಇಲ್ಲವೆಂದು ಹೇಳಿದ್ದೀರಿ. ದಯಮಾಡಿ ನಾನು ಕೇಳಿರುವ ಪ್ರಶ್ನೆಗಳಿಗೆ ಸಹಕಾರ ಸಚಿವರು ಉತ್ತರವನ್ನು ಹೇಳಬೇಕು.

ಶ್ರೀ ಲಕ್ಷ್ಮಣ ಸವದಿ (ಸಹಕಾರ ಸಚಿವರು) :- ಮಾನ್ಯ ಅಧ್ಯಕ್ಷರೆ, ಹಿರಿಯ ಸಹಕಾರಿ ಧುರೀಣರು ಬಹಳ ಒಳ್ಳೆಯ ಉಪ ಪ್ರಶ್ನೆಗಳನ್ನು ಇವತ್ತು ಎತ್ತಿದ್ದಾರೆ. ಈ ರಾಜ್ಯದಲ್ಲಿರತಕ್ಕಂಥ ಅನೇಕ ಸಂಘಗಳ ಆಡಿಟ್ ಇನ್ನೂ ಬಾಕಿ ಇರತಕ್ಕಂಥದ್ದರ ಬಗ್ಗೆ ಮೊದಲನೆಯ ಪ್ರಶ್ನೆಯನ್ನು ಕೇಳಿದ್ದಾರೆ. ಬಹಳಷ್ಟು ಸಿಬ್ಬಂದಿಗಳ ಕೊರತೆ ಇರುವುದರಿಂದ, ಮತ್ತು ಅದರ ಜೊತೆಗೆ ವೈದ್ಯನಾಥನ್ ವರದಿಯನ್ನು ಅನುಷ್ಠಾನಕ್ಕೆ ತರಬೇಕು ಎನ್ನತಕ್ಕಂಥ ಉದ್ದೇಶವನ್ನಿಟ್ಟುಕೊಂಡು ಎಲ್ಲಾ ಆಡಿಟ್ ಅಧಿಕಾರಿಗಳು ಮಾರ್ಚ್ 31 ರೊಳಗೆ ಎಲ್ಲ ಸಂಘಗಳ ಸಂಪೂರ್ಣ ಆಡಿಟ್ ಕಾರ್ಯವನ್ನು ಸಂಪೂರ್ಣವಾಗಿ ಮುಗಿಸಬೇಕು ಎಂದು ನಿರ್ದೇಶನವನ್ನು ಕೊಟ್ಟಿದ್ದೇವೆ. ಆ ಒಂದು ಹಿನ್ನೆಲೆಯಲ್ಲಿ ಎಲ್ಲಾ ಸಂಘ ಸಂಸ್ಥೆಗಳ ಆಡಿಟ್ ಪೂರ್ಣವಾಗುವಂಥ ಲಕ್ಷಣಗಳಿವೆ. ಆದರೆ ತಾವು ಕೇಳಿರತಕ್ಕಂಥ ಉಪ ಪ್ರಶ್ನೆ ಈ ರಾಜ್ಯದಲ್ಲಿರತಕ್ಕಂಥ ಅನೇಕ ಸಂಘ ಸಂಸ್ಥೆಗಳಲ್ಲಿ ಮರು-ಆಡಿಟ್ ಮಾಡಿದ್ದೀರಾ ಅಥವಾ ಇಲ್ಲವೇ ಎಂದು ಕೇಳಿದ್ದೀರಿ. ನಾವು ಮರು-ಆಡಿಟ್ ಮಾಡಿಲ್ಲವೆಂದು ಹೇಳಿದ್ದೇವೆ. ಆದರೆ ತಮ್ಮ ವಿಚಾರದಲ್ಲಿ ಏನು ಅಡಗಿದೆಯೆಂದರೆ ಮರು-ಆಡಿಟ್ ಆಗಿಲ್ಲವೆಂದರೆ ಅವುಗಳು ಎಲ್ಲವೂ ಕೂಡ ಚೆನ್ನಾಗಿದೆ ಎನ್ನತಕ್ಕಂಥ ಭಾವನೆ ನಿಮ್ಮಲ್ಲಿದೆ. ಒಂದು ಸಾರಿ ಒಂದು ಸಂಸ್ಥೆಯ ಲೆಕ್ಕಗಳನ್ನು ಆಡಿಟ್ ಮಾಡಿದ ಮೇಲೆ ಮತ್ತೆ ಮರು-ಆಡಿಟ್ ಮಾಡುವಂಥ ಅವಶ್ಯಕತೆ ಇರುವುದಿಲ್ಲ. ಅಲ್ಲಿ ಏನು ಲೋಪದೋಷಗಳಾಗಿರುತ್ತವೆ ಅದನ್ನು ನೋಡಿ ಅದರ ಮೇಲೆ ಕ್ರಮ ತೆಗೆದುಕೊಳ್ಳತಕ್ಕಂಥದ್ದು ಏನು ಇರುತ್ತದೋ ಆ ಕ್ರಮವನ್ನು ತೆಗೆದುಕೊಳ್ಳುವ ಪ್ರಕ್ರಿಯೆಯನ್ನು ಮುಂದುವರೆಸಿದ್ದೇವೆ. ಬಹುಶ: ತಮಗೆ ತಪ್ಪು ಗ್ರಹಿಕೆಯಾಗಿರಬಹುದು. ಮರು-ಆಡಿಟ್ ನಾವು ಎಲ್ಲಿಯೂ ಕೂಡ ಮಾಡಿಲ್ಲ. ಆದರೆ ತಮ್ಮ ಗ್ರಹಿಕೆ ಯಾವುದಿದೆ ಎಂಬುಂದು ನನಗೆ ಅರ್ಥವಾಗುತ್ತಿಲ್ಲ. ಮರು-

ಪರಿಶೀಲನೆಯನ್ನು ಮಾಡಿದ್ದೇವೆ. ಮರು–ಪರಿಶೀಲನೆಯನ್ನು ಮಾಡಿರತಕ್ಕಂಥದ್ದು ಬಹುಶ: ತಮ್ಮ ಭಾವನೆ ಕೇಳಿರತಕ್ಕಂಥದ್ದರಲ್ಲಿ ಬಹುಶ: ಕೆ.ಎಂ.ಎಫ್. ದು ಉದ್ದೇಶವಿರಬಹುದು ಎಂದು ನಾನು ಭಾವಿಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ :–ಮಾನ್ಯ ಸಹಕಾರ ಸಚಿವರೆ, ಕೆಲಸ ಮಾಡುತ್ತಿರುವ 33495 ಸೊಸೈಟಿಗಳಿವೆ. ಇ 33495 ರಲ್ಲಿ, ನೀವು ಇಗ ಹೇಳಿದರಿ ಕೆ.ಎಂ.ಎಫ್. ದು ಮರು–ಪರಿಶೀಲನೆಗೆ ಕೊಟ್ಟಿದ್ದೇವೆಂದು. ಅದಕ್ಕೇನೂ ನನ್ನ ತಕರಾರಿಲ್ಲ. ನಾನು ಅದರ ಬಗ್ಗೆ ಇವತ್ತಿನವರೆಗೂ ಏನೂ ಮಾತನಾಡಿಲ್ಲ. ಯಾವ ತರಹದ ತನಿಖೆಯನ್ನು ಮಾಡಿದರೂ ನಾನು ತನಿಖೆಗೆ ಸಿದ್ಧನಿದ್ದೇನೆ. 9 ಸಾರಿ ತನಿಖೆಯನ್ನು ಈಗಾಗಲೇ ಮಾಡಿದ್ದೀರಿ. ಕಾಂಗ್ರೆಸ್ ಸರ್ಕಾರ ತನಿಖೆ ಮಾಡಿಸಿದೆ. ಬಿ.ಜೆ.ಪಿ. ಸರ್ಕಾರ ತನಿಖೆ ಮಾಡಿಸುತ್ತಿದೆ. ಮಾಡಿಸಲಿ. ನನ್ನ ತನಿಖೆಗೆ ಮಾಡುವುದಕ್ಕೆ ಹೋಗಿ ಕಾಂಗ್ರೆಸ್ ಸರ್ಕಾರ 140 ಇದ್ದದ್ದು 61 ಕ್ಕೆ ಬಂತು. ನಾವೇನೂ ಅದರ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ. ನಾನು ಮಾನ್ಯ ಸಹಕಾರ ಸಚಿವರಲ್ಲಿ ಒಂದೇ ಒಂದು ಪ್ರಶ್ನೆಯನ್ನು ಕೇಳುವುದೇನೆಂದರೆ, 33 ಸಾವಿರ ಸೊಸೈಟಿಗಲಲ್ಲಿ ಯಾವ ಯಾವ ಸಂಘಗಳದ್ದನ್ನು ರಾಜ್ಯದಲ್ಲಿ ಮರು–ಪರಿಶೀಲನೆ ಮಾಡಿದ್ದೀರಿ? ಇವತ್ತು ರಾಜ್ಯದಲ್ಲಿ ಎಷ್ಟು ಸಂಘಗಳು ನಷ್ಟದಲ್ಲಿವೆ? ಅವುಗಳೆಲ್ಲದರಲ್ಲಿಯೂ ಮರು–ಪರಿಶೀಲನೆಯನ್ನು ಮಾಡಿದ್ದೀರ? ಈ ರಾಜ್ಯದಲ್ಲಿ ಯಾವ ಯಾವ ಫೆಡರೇಶನ್‌ಗಳು ಎಷ್ಟೆಷ್ಟು ನಷ್ಟದಲ್ಲಿವೆ? ಅವುಗಳ ಮರು–ಪರಿಶೀಲನೆಯನ್ನು ಏಕೆ ಮಾಡುತ್ತಿಲ್ಲ? ಏನಾದರೂ ಸಹಕಾರಿ ಇಲಾಖೆಯ ಅಧಿಕಾರಿಗಳು, ಕಾರ್ಯದರ್ಶಿ, ನಿಮ್ಮ ರಿಜಿಸ್ಟ್ರಾರ್‌ರವರ ಜೊತೆ ಏನಾದರೂ ಕೊಲ್ಯೂಡ್ ಆಗಿದ್ದಾರೆಯೆ? ಕೊಲ್ಯೂಡ್ ಆಗಿರುವವರನ್ನು ನೀವು ಪ್ರಾಸಿಕ್ಯೂಟ್ ಮಾಡಿ. ಉದಾಹರಣೆಗೆ ಹೇಳುವುದಾದರೆ ನಿಮ್ಮದೇ ಅಪೆಕ್ಸ್ ಬ್ಯಾಂಕ್, ಅಪೆಕ್ಸ್ ಬ್ಯಾಂಕ್‌ನಲ್ಲಿ ನೀವು ಉಪಾಧ್ಯಕ್ಷರಾಗಿದ್ದೀರಿ. ನಿಮ್ಮ ಎಂ.ಡಿ ಏನು ಮಾಡುತ್ತಾರೆಂದರೆ, ನಬಾರ್ಡ್ ಫೈನಾನ್ಸ್ ಬಗ್ಗೆ ಹೇಳಿದೆನಲ್ಲ, 33 ಲಕ್ಷದ ಮೇಲೆ ಫೈನಾನ್ಸ್ ಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳಿ 25 ಕೋಟಿ ಸಾಲವನ್ನು ಕೊಟ್ಟರಲ್ಲಾ, ಈ ಎಂ.ಡಿ. ಮತ್ತೆ ಪರ್ಮಿಶನ್ ಅವರೇ ಕೊಡುತ್ತಾರೆ ಸಹಕಾರಿ ಇಲಾಖೆಯ ಕಾರ್ಯದರ್ಶಿಯಾಗಿ 25 ಕೋಟಿ ರೂಪಾಯಿಗೆ ಇದೊಂದು ಸಾರಿ ಎಕ್ಸ್‌ಂಪ್‌ಶನ್ ಕೊಡುತ್ತೇವೆಂದು. ಪ್ರಾಸಿಕ್ಯೂಟ್, ಮಾಡಿ ಅವರನ್ನು. ಅವರನ್ನು ನೀವು ಪ್ರಾಸಿಕ್ಯೂಟ್ ಮಾಡಿ.

ಶ್ರೀ ಲಕ್ಷ್ಮಣ ಸವದಿ (ಸಹಕಾರ ಸಚಿವರು):– ಅದರ ಬಗ್ಗೆ ನಾವು ಬರೆದುಕೊಂಡಿದ್ದೇವೆ. ಮರು ಪ್ರಶ್ನೆ ಹಾಕುವಂಥ ಪ್ರಶ್ನೆಯೇ ಇಲ್ಲ. ಮಾನ್ಯ ರೇವಣ್ಣನವರ ಪ್ರಶ್ನೆ ಏನೆಂದರೆ, ಈ ರಾಜ್ಯದಲ್ಲಿ ಮರು–ಪರಿಶೀಲನೆಯನ್ನು ಯಾವ ಯಾವ ಸಂಸ್ಥೆಗಳದ್ದನ್ನು ಮಾಡಿಸಿದ್ದೀರಿ ಎಂದು ಕೇಳುತ್ತಿದ್ದಾರೆ. 2005–06 ರಲ್ಲಿ ಸುಮಾರು ಎರಡು ಪ್ರಕರಣಗಳಲ್ಲಿ ಮರು–ಪರಿಶೀಲನೆಯನ್ನು ಮಾಡಲಾಗಿದೆ. ಇದರ ಬಗ್ಗೆ ಡೀಟೈಲ್ಸ್ ಕೊಡುತ್ತೇನೆ. ಇದರಲ್ಲಿ ಏನನ್ನೂ ಮುಚ್ಚಿಡುವಂಥ ಪ್ರಶ್ನೆಯೇ ಇಲ್ಲ. ಪಾರದರ್ಶಕವಾಗಿ ಸರ್ಕಾರ ನಡೆಯುತ್ತಿದೆ, ಪಾರದರ್ಶಕವಾಗಿಯೇ ನಾವು

ವಿವರಗಳನ್ನು ಕೊಡುತ್ತಿದ್ದೇವೆ. 2006–07 ರಲ್ಲಿ ಒಂಭತ್ತು ಪ್ರಕರಣಗಳಲ್ಲಿ ಮರು–ಪರಿಶೀಲನೆಯನ್ನು ಮಾಡಲಾಗಿದೆ. 2007–08 ನೇ ಸಾಲಿನಲ್ಲಿ ಸುಮಾರು ಒಂಭತ್ತು ಪ್ರಕರಣಗಳಲ್ಲಿ ಮರು–ಪರಿಶೀಲನೆಯನ್ನು ಮಾಡಲಾಗಿದೆ. ತಮ್ಮ ಭಾವನೆ ಏನು ಮರು–ಪರಿಶೀಲನೆ ಮಾಡಿರಲಿಕ್ಕಿಲ್ಲ ಎನ್ನತಕ್ಕಂಥದ್ದು. ಆದರೆ ಮರು–ಪರಿಶೀಲನೆಯಾಗಿದೆ.

ಅಧ್ಯಕ್ಷರು :– ರೇವಣ್ಣನವರೆ ವಿವರಗಳನ್ನು ಹೇಳುವುದನ್ನು ನೋಡಿದರೆ ಈ ಪ್ರಶ್ನೆ ಅರ್ಧ ಗಂಟೆ ಕಾಲಾವಧಿ ಚರ್ಚೆಗೇ ಹೋಗಬೇಕೆನಿಸುತ್ತದೆಯೇನೋ. ಪ್ರಶ್ನೋತ್ತರ ಅವಧಿಯಲ್ಲಿ ದೀರ್ಘವಾಗಿ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ :–ಮಾನ್ಯ ಅಧ್ಯಕ್ಷರೆ, ನೀವು ಬೇಕಾದರೆ ಒಂದು ಗಂಟೆ ಕಾಲಾವಧಿಯನ್ನು ಇದರ ಚರ್ಚೆಗೆ ಇಡಿ. ಚರ್ಚೆ ಮಾಡೋಣ.

ಅಧ್ಯಕ್ಷರು :– ಅಜೆಂಡಾದಲ್ಲಿರುವುದೆಲ್ಲಾ ಮುಗಿದ ಮೇಲೆ ಬೇಕಾದರೆ ಇಡೋಣ.

ಶ್ರೀ ಹೆಚ್.ಡಿ.ರೇವಣ್ಣ :–ನೀವು ಬೇಕಾದರೆ ಸದನನ್ನು ನಾಳೆಗೆ ಒಂದು ದಿನದಮಟ್ಟಿಗೆ ಮುಂದೂಡಿ. ನಾಳೆ ಇದರ ಬಗ್ಗೆಯೇ ಮಾತನಾಡೋಣ. ಎಲ್ಲರೂ ಇರುತ್ತಾರೆ. ಒಂದು ಗಂಟೆ ಇದನ್ನೇ ಚರ್ಚೆ ಮಾಡೋಣ.

ಅಧ್ಯಕ್ಷರು :– ಇವತ್ತೇ ಅಜೆಂಡಾದಲ್ಲಿರುವುದೆಲ್ಲಾ ಮುಗಿದ ಮೇಲೆ ಈ ವಿಷಯವನ್ನು ಚರ್ಚೆಗೆ ಇಡೋಣವಂತೆ. ಮಾನ್ಯ ಸಚಿವರೆ ಅವರ ಪ್ರಶ್ನೆಗೆ ಈಗ ಉತ್ತರ ಹೇಳಿ.

ಶ್ರೀ ಲಕ್ಷ್ಮಣ ಸವದಿ:– 2005–06 ರಲ್ಲಿ ಎರಡು ಪ್ರಕರಣಗಳು, 2006–07 ರಲ್ಲಿ ಒಂಭತ್ತು ಪ್ರಕರಣಗಳು ಮತ್ತು 2007–08 ರಲ್ಲಿ ಏಳು ಪ್ರಕರಣಗಳು. ಈ ಬಗ್ಗೆ ಸೊಸೈಟಿವೈಸ್ ಲಿಸ್ಟ್ ಬೇಕೆಂದರೆ ಅದನ್ನೂ ಕೊಡುತ್ತೇವೆ.

ಶ್ರೀ ಹೆಚ್.ಡಿ.ರೇವಣ್ಣ :– ಮಾನ್ಯ ಅಧ್ಯಕ್ಷರೆ, ಅವರು ಮರು–ಪರಿಶೀಲನೆಯನ್ನು ಮಾಡಿಸುತ್ತಾರೆ. ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಈ ಆಡಳಿತ ಮಂಡಳಿಗೆ ಮರು–ಪರಿಶೀಲನೆಯನ್ನು ಮಾಡುವಂಥ ಸಂದರ್ಭದಲ್ಲಿ ಈ ಆಡಿಟ್ ರಿಪೋರ್ಟ್‌ಕೊಡುತ್ತಾರಲ್ಲಾ, ಅದನ್ನು ವರ್ಷ ವರ್ಷವೂ ಈ ಆಡಿಟ್ ರಿಪೋರ್ಟ್‌ನ್ನು ಕೊಡುತ್ತಾರೆ, ರಿಪೋರ್ಟ್ ಕೊಡುವಾಗ ಈ ಆಡಳಿತ ಮಂಡಳಿಗೆ ತಪ್ಪು ಮಾಹಿತಿ ಕೊಟ್ಟಂಥ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮವನ್ನು ನೀವು ತೆಗೆದುಕೊಳ್ಳುತ್ತೀರ? ಆಡಳಿತ ಮಂಡಳಿಗೆ ತಪ್ಪು ಮಾಹಿತಿಯನ್ನು ಕೊಟ್ಟು ಆಡಳಿತ ಮಂಡಳಿಯವರನ್ನು ಇಕ್ಕಟ್ಟಿಗೆ ಸಿಕ್ಕಿಹಾಕಿಸುತ್ತಾರಲ್ಲಾ ಈ ಆಡಿಟರ್‌ಗಳು ಏನಿರುತ್ತಾರೆ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೀರ? ಆಡಿಟರ್‌ಗಳಿರಬಹುದು ಅಥವಾ ಸಹಕಾರಿ ಇಲಾಖೆಯ ಹಿರಿಯ ಅಧಿಕಾರಿಗಳಿರಬಹುದು, ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ನೀವು ತಯಾರಿದ್ದಿರ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಲಕ್ಷ್ಮಣ ಸವದಿ :– ಮಾನ್ಯ ಅಧ್ಯಕ್ಷರೆ, ಅಧಿಕಾರಿಗಳಿರಬಹುದು, ಆಡಳಿತ ಮಂಡಳಿಯ ಸದಸ್ಯರಿರಬಹುದು ಅಥವಾ ಅಧ್ಯಕ್ಷರಿರಬಹುದು, ಕಾನೂನು

ಚೌಕಟ್ಟು ಮೀರಿ ಯಾರು ಕ್ರಮವನ್ನು ತೆಗೆದುಕೊಂಡಿರುತ್ತಾರೋ ಅವರ ಮೇಲೆ ಕ್ರಮವನ್ನು ಸರ್ಕಾರ ತೆಗೆದುಕೊಳ್ಳುತ್ತದೆ. ಇದರ ಬಗ್ಗೆ ಕಾನೂನಿನ ಚೌಕಟ್ಟಿನಲ್ಲಿ ಏನು ಕ್ರಮವನ್ನು ತೆಗೆದುಕೊಳ್ಳಬಹುದೋ ಆ ರೀತಿಯ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಹೆಚ್.ಡಿ. ರೇವಣ್ಣ :– ಯಾವುದೇ ಸ್ಪೇಟ್ ಲೆವೆಲ್ ಫೆಡರೇಶನ್ ಇರಬಹುದು, ಜಿಲ್ಲೆಯದ್ದಿರಬಹುದು, ಅಂಥದ್ದು ಯಾವುದಾದರೂ ಇದ್ದರೆ ನೀವು ತೆಗೆದುಕೊಳ್ಳುವುದಕ್ಕೆ ರೆಡಿ ಇದ್ದೀರ?

ಶ್ರೀ ಲಕ್ಷ್ಮಣ ಸವದಿ :– ತಂದು ಕೊಡಿ. ನಿಶ್ಚಿತವಾಗಿ ಅಂಥದ್ದು ಯಾವುದಾದರೂ ಇದ್ದರೆ ತಂದು ಕೊಡಿ. ಪರಿಶೀಲನೆಯನ್ನು ಮಾಡೋಣವಂತೆ.

ಶ್ರೀ ಹೆಚ್.ಡಿ.ರೇವಣ್ಣ :– ಓ.ಕೆ., ತಂದುಕೊಡುತ್ತೇವೆ.

68(135) ಶ್ರೀ ಬಾಲಕೃಷ್ಣ (ಮಾಗಡಿ)

ಪಿ. ಎಮ್. ನರೇಂದ್ರ ಸ್ವಾಮಿ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ಮಾಗಡಿ ವಿಧಾನ ಸಭಾ ಕ್ಷೇತ್ರದಲ್ಲಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು; ಆ ಪೈಕಿ ಯಾವ ಯಾವ ಕೇಂದ್ರಗಳಿಗೆ ಕಟ್ಟಡಗಳ ಕೊರತೆ ಇದೆ (ವಿವರ ನೀಡುವುದು);

ಮಾಗಡಿ ವಿಧಾನ ಸಭಾ ಕ್ಷೇತ್ರದಲ್ಲಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ: 395 131 ಕೇಂದ್ರಗಳಿಗೆ ಕಟ್ಟಡಗಳ ಕೊರತೆ ಇದೆ (ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ)

ಆ) ಕೊರತೆ ಇರುವ ಕಟ್ಟಡಗಳ ನಿರ್ಮಾಣಕ್ಕೆ ಈಗಾಗಲೇ ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ;

2008–09ನೇ ಸಾಲಿನಲ್ಲಿ ವಿಶೇಷ ಅಭಿವೃದ್ಧಿ ಕಾರ್ಯಕ್ರಮಗಳಡಿ–11, ನಬಾರ್ಡ್–13 ರಡಿ ನಬಾರ್ಡ್–12 ರಡಿ 5 ಹಾಗೂ ಇಲಾಖಾ ಅನುದಾನದಡಿ–5 ಕಟ್ಟಡಗಳನ್ನು ನಿರ್ಮಿಸಲಾಗುತ್ತಿದೆ.

ಇ) ಹಾಗಿದ್ದಲ್ಲಿ, ಈ ಕಟ್ಟಡಗಳ ಕೊರತೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ನಿವೇಶನ ಹಾಗೂ ಅನುದಾನದ ಲಭ್ಯತೆಯ ಮೇರೆಗೆ ಹಂತ ಹಂತವಾಗಿ ಕಟ್ಟಡಗಳನ್ನು ನಿರ್ಮಿಸಲಾಗುವುದು.

ಅನುಬಂಧ

ಕಟ್ಟಡಗಳು ಇಲ್ಲದಿರುವ ಅಂಗನವಾಡಿ ಕೇಂದ್ರಗಳು

1.	ಮಾಯನಾಯಕನಹಳ್ಳಿ	33.	ಮರುಳಬೇವನಪುರ
2.	ಬಸವನಪಾಳ್ಯ	34.	ಅತ್ತಿಮರದಪಾಳ್ಯ
3.	ಶ್ರೀಪತಿಹಳ್ಳಿ	35.	ಎಳೆಗೆಹಳ್ಳಿ ಕಾಲೋನಿ